ಕರ್ನಾಟಕ ಸರ್ಕಾರ

ಮಾರ್ಚ್ 15, 2017

# ರಾಜ್ಯ ಆಯವ್ಯಯ ಉತ್ತಮ ಹಾಗೂ ಬೆಳವಣಿಗೆಗೆ ಪೂರಕ : ಸಿದ್ದರಾಮಯ್ಯ



**ಬೆಂಗಳೂರು, ಮಾರ್ಚ್ 15:**

ಕೃಷಿ, ತೋಟಗಾರಿಕೆ, ನೀರಾವರಿ, ಶಿಕ್ಷಣ, ಆರೋಗ್ಯ, ವಿದ್ಯುತ್, ಸಮಾಜ ಕಲ್ಯಾಣ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರಗಳಿಗೆ ನೀಡಿರುವ ಆದ್ಯತೆಯನ್ನು ಮುಂದುವರೆಸಿರುವ 2017–18 ನೇ ಸಾಲಿನ ರಾಜ್ಯ ಆಯವ್ಯಯವನ್ನು ಉತ್ತಮ ಹಾಗೂ ಬೆಳವಣಿಗೆಗೆ ಪೂರಕ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಣ್ಣಿಸಿದ್ದಾರೆ.

ಸಾಮಾಜಿಕ ನ್ಯಾಯ ಹಾಗೂ ಸರ್ವರನ್ನೂ ಒಳಗೊಳ್ಳುವ ತಳಹದಿಯ ಮೇಲೆ ತಾವು ಮುಖ್ಯಮಂತ್ರಿಯಾಗಿ ಮಂಡಿಸುತ್ತಿರುವ ಐದನೇ ಆಯವ್ಯಯ ಕುರಿತಂತೆ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿ, ತಮ್ಮ ಈ ಆಯವ್ಯಯದ ವಿಶೇಷತೆಯ ಕುರಿತು ಬೆಳಕು ಚೆಲ್ಲಿದರು.

2017–18 ನೇ ಸಾಲಿನ ಆಯವ್ಯಯದ ಗಾತ್ರ 1,86,561 ಕೋಟಿ ರೂ. ಆಗಿದ್ದು, 2016–17 ನೇ ಸಾಲಿನ ಆಯವ್ಯಯ ಗಾತ್ರ 1,63,419 ಕೋಟಿ ರೂ. ಆಗಿತ್ತು. ಒಟ್ಟಾರೆ ಆಯವ್ಯಯ ಗಾತ್ರದಲ್ಲಿ ಶೇಕಡಾ 14.16 ಹೆಚ್ಚಳ ಅಥವಾ ಬೆಳವಣಿಗೆಯನ್ನು ಕಾಣಬಹುದು. ಅಂತೆಯೇ, ಬಂಡವಾಳ ವೆಚ್ಚದಲ್ಲಿ ಶೇಕಡಾ 16 ಹಾಗೂ ಸಂಪತ್ತು ಸೃಷ್ಟಿಯಲ್ಲಿ ಶೇಕಡಾ 18 ರ ಬೆಳವಣಿಗೆಯಾಗಿದೆ.

## ವಿತ್ತೀಯ ಕೊರತೆ ನಿಯಂತ್ರಣದಲ್ಲಿ

ವಿತ್ತೀಯ ಹೊಣೆಗಾರಿಕೆ ಕಾಯಿದೆಯ ಮಾನದಂಡಗಳ ಆಧಾರದ ಮೇರೆಗೆ ಸತತವಾಗಿ ನಾಲ್ಕನೇ ವರ್ಷವೂ ವಿತ್ತೀಯ ಕೊರತೆ ಶೇಕಡಾ ಮೂರಕ್ಕಿಂತಲೂ ಕಡಿಮೆ ಇದೆ. ಅಲ್ಲದೇ, ಮುಂದಿನ ವರ್ಷವೂ ವಿತ್ತೀಯ ಕೊರತೆಯ ಮಿತಿಯನ್ನು ಶೇಕಡಾ ಮೂರರೊಳಗೆ ನಿಯಂತ್ರಣದಲ್ಲಿರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ವಿಶೇಷ ಘಟನೆ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯ ಅನುಷ್ಠಾನಕ್ಕೆ ಪ್ರಸಕ್ತ ಸಾಲಿನಲ್ಲಿ ಮೀಸಲಿರಿಸಿದ್ದ ಅನುದಾನ 19,543 ಕೋಟಿ ರೂ. ಹಾಗೂ ಮುಂದಿನ ವರ್ಷದಲ್ಲಿ ಈ ಅನುದಾನದ ಮೊತ್ತ 27,707 ಕೋಟಿ ರೂ. ಆಗಿದೆ. ಈ ಬಾಬ್ತಿನಲ್ಲಿ ಶೇಕಡಾ 42 ರ ಬೆಳವಣಿಗೆ ಕಾಣಬಹುದು.

## ತೆರಿಗೆ ಸಂಗ್ರಹಣೆಯಲ್ಲಿ ಕೊರತೆ

ಮುದ್ರಾಂಕ ಹಾಗೂ ನೋಂದಣಿಯನ್ನು ಹೊರತುಪಡಿಸಿದಲ್ಲಿ ಉಳಿದೆಲ್ಲಾ ತೆರಿಗೆಗಳ ಸಂಗ್ರಹಣಾ ಬಾಬ್ತುಗಳಲ್ಲೂ ನಿಗಧಿತ ಗುರಿ ಸಾಧನೆ ಆಗಿದೆ. ಆದರೆ, ಅಪನಗಧೀಕರಣದ ಹಿನ್ನೆಲೆಯಲ್ಲಿ ಮುದ್ರಾಂಕ ಹಾಗೂ ನೋಂದಣಿ ಶುಲ್ಕದ ಬಾಬ್ತಿನಲ್ಲಿ ನಿರೀಕ್ಷಿತ ಪ್ರಗತಿಯಾಗದೆ ಶೇಕಡಾ 25 ರಷ್ಟು ಕೊರತೆ ಅಂದರೆ 1350 ಕೋಟಿ ರೂ. ತೆರಿಗೆ ಸಂಗ್ರಹಣೆ ಆಗಿದೆ.

ಕೃಷಿ ಮತ್ತು ತೋಟಗಾರಿಕಾ ಅನುದಾನದಲ್ಲಿ ಪ್ರಸಕ್ತ ಸಾಲಿನಲ್ಲಿ 12,696 ಕೋಟಿ ರೂ. ಇದ್ದು, ಮುಂಬರುವ ಸಾಲಿನಲ್ಲಿ ಇದಕ್ಕೆ ಮೀಸಲಿರಿಸಿರುವ ಅನುದಾನದ ಮೊತ್ತ 15,929 ಕೋಟಿ ರೂ. ಆಗಿದೆ. ಹಿಂದಿನ ಸಾಲಿಗೆ ಹೋಲಿಸಿದರೆ ಹಂಚಿಕೆಯಲ್ಲಿ 3,233 ಕೋಟಿ ರೂ. ಹೆಚ್ಚಳವಾಗಿದೆ.

## ನುಡಿದಂತೆ ನಡೆದಿದ್ದೇವೆ

ಅಂತೆಯೇ, ತಮ್ಮ ಸರ್ಕಾರ ಅಧಿಕಾರಕ್ಕೆ ಬಂದಲ್ಲಿ ಐದು ವರ್ಷಗಳಲ್ಲಿ ನೀರಾವರಿಗೆ 50,000 ಕೋಟಿ ರೂ. ಅನುದಾನವನ್ನು ವೆಚ್ಚ ಮಾಡುವುದಾಗಿ ಭರವಸೆ ನೀಡಲಾಗಿತ್ತು. ಇದೀಗ 2017–18 ನೇ ಸಾಲಿನ ಆಯವ್ಯಯವನ್ನೂ ಒಳಗೊಂಡಂತೆ ನೀರಾವರಿಗೆ ಮಾತ್ರವಲ್ಲ, ಭಾರೀ ಮತ್ತು ಮಧ್ಯಮ ನೀರಾವರಿ ಕ್ಷೇತ್ರಕ್ಕೆ 54,893 ಕೋಟಿ ರೂ. ವೆಚ್ಚ ಮಾಡಲಾಗುವುದು. ಹಿಂದಿನ ಭಾರತೀಯ ಜನತಾ ಪಕ್ಷದ ಸರ್ಕಾರದ ಅವಧಿಯಲ್ಲಿ ಈ ಬಾಬ್ತಿಗೆ 21,125 ಕೋಟಿ ರೂ. ವೆಚ್ಚ ಮಾಡಿತ್ತು. ತಮ್ಮ ಸರ್ಕಾರ 33,771 ಕೋಟಿ ರೂ. ಅಧಿಕ ಮೊತ್ತವನ್ನು ವೆಚ್ಚ ಮಾಡುತ್ತಿದೆ. ತಮ್ಮ ಸರ್ಕಾರದ ಅಧಿಕಾರಾವಧಿ ಪೂರ್ಣಗೊಳ್ಳುವ ವೇಳೆಗೆ ಒಟ್ಟಾರೆ ನೀರಾವರಿ ಕ್ಷೇತ್ರಕ್ಕೆ 62,000 ಕೋಟಿ ರೂ. ವೆಚ್ಚವಾಗುವ ನಿರೀಕ್ಷೆ ಇದೆ. ಇದು ನುಡಿದಂತೆ ನಡೆದಿದ್ದೇವೆ ಎಂಬ ತಮ್ಮ ಸರ್ಕಾರದ ಧ್ಯೇಯ ವಾಕ್ಯದ ಅಕ್ಷರಶಃ ಪಾಲಿಸಲಾಗುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಗ್ರಾಮೀಣಾಭಿವೃದ್ಧಿ ಕ್ಷೇತ್ರಕ್ಕೆ ಹಿಂದಿನ ಸರ್ಕಾರ ಐದು ವರ್ಷಗಳ ತನ್ನ ಅಧಿಕಾರಾವಧಿಯಲ್ಲಿ ಮಾಡಿದ ಅನುದಾನದ ವೆಚ್ಚ 20,664 ಕೋಟಿ ರೂ. ತಮ್ಮ ಸರ್ಕಾರ ಮಾಡಿರುವ ವೆಚ್ಚ 52,293 ಕೋಟಿ ರೂ.ಆಗಿದೆ.

ಯಾವುದೇ ಹೆಚ್ಚುವರಿ ಅನುದಾನ ಮೀಸಲಿರಿಸದೆಯೇ ಹಾಗೂ ಯಾವುದೇ ಹೊಸ ಕಾರ್ಯಕ್ರಮಗಳನ್ನು ಘೋಷಿಸದೆಯೇ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ ಹಿಂದಿನ ಸರ್ಕಾರ ತನ್ನ ಐದು ವರ್ಷಗಳ ಅವಧಿಯಲ್ಲಿ ಕೃಷಿ ವಲಯಕ್ಕೆ ಒದಗಿಸಿದ ಅನುದಾನ 7,338 ಕೋಟಿ ರೂ. ತಮ್ಮ ಸರ್ಕಾರ ಒದಗಿಸಿರುವ ಅನುದಾನ 19.523 ಕೋಟಿ ರೂ. ಇದು 12,195 ಕೋಟಿ ರೂ. ಅಧಿಕ.

## ಮೂರು ಪಟ್ಟು ಅಧಿಕ ಮೊತ್ತ ವೆಚ್ಚ

ಅಂತೆಯೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರ ಶ್ರೇಯೋಭಿವೃದ್ಧಿಗಾಗಿ ತನ್ನ ಅಧಿಕಾರಾವಧಿಯಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರ ವೆಚ್ಚ ಮಾಡಿದ ಅನುದಾನದ ಮೊತ್ತ 6,664 ಕೋಟಿ ರೂ. ಇದೇ ಬಾಬ್ತಿಗಾಗಿ ತಮ್ಮ ಸರ್ಕಾರ ಒದಗಿಸಿ ಮಾಡಿರುವ ವೆಚ್ಚ 17,389 ಕೋಟಿ ರೂ. ಆಗಿದೆ. ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಹಿಂದಿನ ಸರ್ಕಾರ ತನ್ನ ಅಧಿಕಾರಾವಧಿಯಲ್ಲಿ ಮಾಡಿದ ಒಟ್ಟಾರೆ ವೆಚ್ಚ 3,294 ಕೋಟಿ ರೂ. ಹಾಗೂ ಇದೇ ಬಾಬ್ತಿಗಾಗಿ ತಮ್ಮ ಸರ್ಕಾರ ಮಾಡಿರುವ ವೆಚ್ಚ 10,693 ಕೋಟಿ ರೂ. ಆಗಿದೆ.

ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಲ್ಲಿ ಹಿಂದಿನ ಸರ್ಕಾರ ಮಾಡಿದ ವೆಚ್ಚ 21,440 ಕೋಟಿ ರೂ. ಹಾಗೂ ತಮ್ಮ ಸರ್ಕಾರ ಮಾಡಿರುವ ವೆಚ್ಚ 84,138 ಕೋಟಿ ರೂ. ಆಗಿದೆ. ಈ ಬಾಬ್ತಿನಲ್ಲಿ ಹಿಂದಿನ ಸರ್ಕಾರಕ್ಕಿಂತಲೂ ಮೂರು ಪಟ್ಟು ಅಂದರೆ 62,698 ಕೋಟಿ ರೂ. ಅಧಿಕ ಮೊತ್ತವನ್ನು ವೆಚ್ಚ ಮಾಡಿದ ಕೀರ್ತಿ ತಮ್ಮ ಸರ್ಕಾರದ್ದಾಗಿದೆ ಎಂದು ಮುಖ್ಯಮಂತ್ರಿ ವಿವರಿಸಿದರು.

## ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಬುನಾದಿ

ಅನ್ನಭಾಗ್ಯ ಫಲಾನುಭವಿಗಳಿಗೆ ಪ್ರತಿ ಘಟಕಕ್ಕೆ ಎರಡು ಕೆ. ಜಿ ಹೆಚ್ಚುವರಿ ಆಹಾರ ಧಾನ್ಯವನ್ನು ಉಚಿತವಾಗಿ ನೀಡುವುದು, ಕ್ಷೀರಭಾಗ್ಯ ಯೋಜನೆಯಡಿ ವಾರಕ್ಕೆ ಮೂರು ದಿನಗಳ ಬದಲಾಗಿ ಐದು ದಿನಗಳು ಮಕ್ಕಳಿಗೆ ಕುಡಿಯಲು ಹಾಲು ಕೊಡುವುದು, ಅಂಗನವಾಡಿ ಮಕ್ಕಳಿಗೆ ವಾರಕ್ಕೆ ಐದು ದಿನಗಳು ಕುಡಿಯಲು ಹಾಲು ಕೊಡುವ ಜೊತೆಗೆ ವಾರಕ್ಕೆ ಎರಡು ಬಾರಿ ತಿನ್ನಲು ಮೊಟ್ಟೆ ನೀಡುವುದು ಇವೆಲ್ಲವೂ ಹಸಿವು ಮುಕ್ತ ಕರ್ನಾಟಕದ ಕನಸನ್ನು ಸಾಕಾರ ಮಾಡುವುದರ ಜೊತೆಗೆ ಅಪೌಷ್ಠಿಕತೆಯನ್ನು ತೊಡೆದು ಹಾಕಿ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಬುನಾದಿಯಾಗಲಿದೆ.

## ಹೊಸ ಯೋಜನೆ – ಹೊಸ ಸೇರ್ಪಡೆ – ಹೊಸ ಆಶಯ

ಸರ್ಕಾರಿ ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಪದವಿ ಪೂರ್ವ, ಪದವಿ, ವೈದ್ಯಕೀಯ ಹಾಗೂ ತಾಂತ್ರಿಕ ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿರುವ ಒಂದೂವರೆ ಲಕ್ಷ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡಿ ಅವರ ವ್ಯಾಸಂಗಕ್ಕೆ ಪುಷ್ಠಿ ನೀಡುವ ಹಾಗೂ 12 ಲಕ್ಷ ಗರ್ಭಿಣಿಯರಿಗೆ ಬಿಸಿಯೂಟ ಕೊಡುವ ಮಾತೃಪೂರ್ಣ ಹೊಸ ಯೋಜನೆಗಳು ಈ ಬಜೆಟ್‌ನ ಹೊಸ ಸೇರ್ಪಡೆಗಳು.

ವಸತಿಗೆ ಮತ್ತಷ್ಟು ಒತ್ತು, ನಿವೇಶನ ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಅರ್ಜಿ ಹಾಕಿದಲ್ಲಿ ಮನೆ ಮಂಜೂರು, ಆರು ಹೊಸ ವೈದ್ಯಕೀಯ ಮಹಾ ವಿದ್ಯಾಲಯಗಳ ಪ್ರಾರಂಭಕ್ಕೆ ಚಾಲನೆ,

ಐದು ಜಿಲ್ಲಾ ಆಸ್ಪತ್ರೆಗಳನ್ನು ಜಿಲ್ಲಾ ಸ್ಪೆಷಲ್ ಆಸ್ಪತ್ರೆಗಳಾಗಿ ಮೇಲ್ದರ್ಜೆಗೆ ಏರಿಕೆ ಹಾಗೂ 49 ಹೊಸ ತಾಲ್ಲೂಕುಗಳ ರಚನೆ ಈ ಬಜೆಟ್‌ನ ಹೊಸ ಆಶಯಗಳು.

**ಸಣ್ಣ ಉದ್ದಿಮೆದಾರರಿಗೆ ರಿಯಾಯಿತಿ**

ಸಣ್ಣ ಉದ್ದಿಮೆದಾರರು ಹತ್ತು ವರ್ಷಗಳ ಯಶಸ್ವಿ ಅಸ್ತಿತ್ವದ ನಂತರ 99 ವರ್ಷಗಳ ಭೋಗ್ಯ–ಮತ್ತು–ಮಾರಾಟ ಯೋಜನೆಯನ್ನು ಸಡಿಲಿಸಿ, ಮಾರಾಟಕ್ಕೆ ಅನುವು ಹಾಗೂ ಇದರಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಫಲಾನುಭವಿಗಳಿಗೆ ಶೇಕಡಾ 50 ಹಾಗೂ ಪ್ರವರ್ಗ–1, ಪ್ರವರ್ಗ–2–ಎ, ಮತ್ತು ಪ್ರವರ್ಗ–2–ಬಿ ಫಲಾನುಭವಿಗಳಿಗೆ ಶೇಕಡಾ 25 ರ ರಿಯಾಯಿತಿ ಯೋಜನೆ ಘೋಷಣೆ ಮಾಡಲಾಗಿದೆ. ಇದು ಬೆಂಗಳೂರು ನಗರ ಪ್ರದೇಶದಲ್ಲಿ ಒಂದು ಎಕರೆ ಹಾಗೂ ರಾಜ್ಯದ ಇತರೆಡೆಗಳಲ್ಲಿ ಎರಡು ಎಕರೆ ಪ್ರದೇಶದೊಳಗೆ ಸ್ಥಾಪಿಸಿರುವ ಕೈಗಾರಿಕೆಗಳಿಗೆ ಮಾತ್ರ ಅನ್ವಯವಾಗುತ್ತದೆ.

ಪ್ರಸಕ್ತ ಸಾಲಿನಲ್ಲಿ ಆಯವ್ಯಯದಲ್ಲಿ ಬೆಂಗಳೂರು ಮಹಾನಗರದ ಅಭಿವೃದ್ಧಿಗಾಗಿ 7,300 ಕೋಟಿ ರೂ ಒದಗಿಸಲಾಗಿದ್ದು, ಮುಂದಿನ ಸಾಲಿನಲ್ಲಿ 7,400 ಕೋಟಿ ರೂ. ಅನುದಾನ ಮೀಸಲಿರಿಸಲಾಗಿದೆ.

ಮೊಸಳೆ ಕಣ್ಣೀರು ಸುರಿಸಬೇಡಿ

ರಾಷ್ಟ್ರೀಕೃತ ಮತ್ತು ವಾಣಿಜ್ಯ ಬ್ಯಾಂಕ್‌ಗಳಲ್ಲಿ ರೈತರು ಪಡೆದಿರುವ ಬೆಳೆ ಸಾಲದ ಕನಿಷ್ಠ ಅರ್ಧದಷ್ಟು ಭಾಗವನ್ನು ಮನ್ನಾ ಮಾಡಿದಲ್ಲಿ ತಮ್ಮ ಸರ್ಕಾರವೂ ಕೂಡಾ ಉಳಿದ ಅರ್ಧ ಭಾಗವನ್ನು ಮನ್ನಾ ಮಾಡಲು ಮುಂದಾಗಲಿದೆ. ಪ್ರತಿ ಪಕ್ಷದ ಮುಖಂಡರು ಕೃಷಿ ಸಾಲದ ಮನ್ನಾ ಕುರಿತಂತೆ ಅನಗತ್ಯ ಹೇಳಿಕೆಗಳನ್ನು ನೀಡಿ ಮೊಸಳೆ ಕಣ್ಣೀರು ಸುರಿಸುವ ಬದಲು ರಾಜ್ಯ ಸರ್ಕಾರದ ಈ ಪ್ರಸ್ತಾವನೆಯನ್ನು ಬೆಂಬಲಿಸಿ ರಾಜ್ಯದ ರೈತರು ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದಿರುವ ಬೆಳೆ ಸಾಲ ಮನ್ನಾಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕೆಂದು ಮುಖ್ಯಮಂತ್ರಿ ಪುನರುಚ್ಚರಿಸಿದರು.

ಸಹಕಾರಿ ಸಂಸ್ಥೆಗಳ ಮೂಲಕ ರಾಜ್ಯದ ರೈತರು ಪಡೆದಿರುವ ಸಾಲದ ಮರು ಪಾವತಿ ಹಾಗೂ ವಸೂಲಾತಿ ಪ್ರಕ್ರಿಯೆಯನ್ನು ಇದೇ ಮಾರ್ಚ್ ಅಂತ್ಯದವರೆಗೆ ಸ್ಥಗಿತಗೊಳಿಸಿ ರೈತರ ಬೆಂಬಲಕ್ಕೆ ನಿಂತಿರುವ ಸರ್ಕಾರದ ಕಾಳಜಿಯನ್ನು ರಾಜ್ಯದ ಜನತೆ ಅರ್ಥ ಮಾಡಿಕೊಳ್ಳಬೇಕೆಂದು ಮುಖ್ಯಮಂತ್ರಿ ಆಶಿಸಿದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ ಸುಭಾಷ್‌ಚಂದ್ರ ಕುಂಟಿಯಾ, ಹಣಕಾಸು ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಐ. ಎಸ್. ಎನ್. ಪ್ರಸಾದ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎಲ್. ಕೆ. ಅತೀಕ್, ಹಣಕಾಸು ಇಲಾಖೆಯ ಕಾರ್ಯದರ್ಶಿಗಳಾದ ಅರವಿಂದ್ ಶ್ರೀವಾತ್ಸವ ಮತ್ತು ರಿತೇಷ್ ಕುಮಾರ್ ಸಿಂಗ್ ಸೇರಿದಂತೆ ಹಿರಿಯ ಅಧಿಕಾರಿಗಳು ಪತ್ರಿಕಾ ಗೋಷ್ಠಿಯಲ್ಲಿ ಹಾಜರಿದ್ದರು.

**********

ಡಿ ಪಿ ಎಂ